SRI D. DEVARAJ URS (Chief Minister).—

(*a*) The Inspector General of Police. has sent the proposal for the construction of Police Quarters at Sandur in Bellary District to Government on 2-12-1977. In view of the economy orders issued by the Finance Department, the proposal could not be considered during the year 1977-78.

(*b*) Yes.

(*c*) This will be considered during the current year 1978-79.

ಶ್ರೀ ಸಿ. ರುದ್ರಪ್ಪ.—ಸ್ವಾಮಿ, (ಅ)ಗೆ ಉತ್ತರವಾಗಿ ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಪೋಲೀಸ್ ವಸತಿ ಗೃಹಗಳನ್ನು ನಿರ್ಮಿಸಲು ಸಲಹೆಯನ್ನು ದಿನಾಂಕ ೨-೧೨-೧೯೭೭ ರಂದು ಆರಕ್ಷಕ ಮಹಾ ನಿರೀಕ್ಷಕರು ಸರ್ಕಾರದವರಿಗೆ ಕಳುಹಿಸಿದ್ದಾರೆ. ಆರ್ಥಿಕ ಇಲಾಖೆಯವರು ಮಿತವ್ಯಯ ಆದೇಶಗಳನ್ನು ಹೊರಡಿಸಿರುವುದರಿಂದಾಗಿ ೧೯೭೭-೭೮ನೇ ಸಾಲಿನಲ್ಲಿ ಸದರಿ ಸಲಹೆಯನ್ನು ಪರಿಶೀಲಿಸಲು ಸಾಧ್ಯವಾಗಲಿಲ್ಲಾ ಎಂದು ಹೇಳಿದ್ದಾರೆ. ಮತ್ತು (ಇ)ಗೆ ಉತ್ತರವಾಗಿ ಪ್ರಸಕ್ತ ಸಾಲಿನಲ್ಲಿ ಅಂದರೆ ೧೯೭೮-೭೯ ನೇ ಸಾಲಿನಲ್ಲಿ ಇದನ್ನು ಪರಿಶೀಲಿಸಲಾಗುವುದು ಅಂತ ಹೇಳಿದ್ದಾರೆ. ಆದುದರಿಂದ, ನಿರ್ದಿಷ್ಟವಾಗಿ ಈ ವರ್ಷದ ಅವಧಿಯಲ್ಲೇ ಈ ಕಾರ್ಯಗಳನ್ನು ಕೈಗೊಳ್ಳುತ್ತೀರಾ ?

† ಶ್ರೀ ಡಿ. ದೇವರಾಜ್ ಅರಸ್.—ಈ ವರ್ಷ ಮಾಡಿಸುತ್ತೇನೆ.

ಶ್ರೀ ಸಿ. ರುದ್ರಪ್ಪ.—ಇದರ ಎಸ್ಟಿಮೇಟ್ ಕಾಸ್ಟ್ ಎಷ್ಟು ಆನ್ನುವುದು ಗೊತ್ತಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಸುಮಾರು ೬ ಲಕ್ಷ ೮೦ ಸಾವಿರ ಒಲ್ಲರೆ ಆಗಬಹುದು.

ಶ್ರೀ ಸಿ. ರುದ್ರಪ್ಪ.—ಈ ವರ್ಷದಲ್ಲಿ ೫೦ ಪರ್ಸೆಂಟ್ ಅಷ್ಟು ಮೊಬಲಗನ್ನಾದರೂ ಖರ್ಚುಮಾಡಿ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಈ ವರ್ಷ ಮಾಡಿಸುತ್ತೇನೆಂದು ಮೊದಲೇ ಹೇಳಿದನಲ್ಲಾ,

Non-achievement of desired results in Janatha Housing Scheme

972. SRI K.B. MALLAPPA (Arakalgud) and SRI B.H. LAKSHMANAIAH (Belur).—Will the Minister of State for Housing be pleased to state:—

whether it has come to the notice of the Government that due to mismanagement in the construction of Janatha Houses lot of injustice is being done to poor people and that the purpose of the scheme is not being achieved ?

SRI D. DEVARAJ URS (Chief Minister) for SRI P. F. RODRIGUES (Minister of State for Housing).—

No.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ, ನಾನು ಈ ಪ್ರಶ್ನೆಯನ್ನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಆಗಿ ಕೊಟ್ಟಿದ್ದರೆ ಇದನ್ನು ಪ್ರಶ್ನೆ ರೂಪವಾಗಿ ಪರಿವರ್ತಿಸಿದ್ದಾರೆ. ಈ ಪ್ರಶ್ನೆ ರಾಜ್ಯಕ್ಕೆ ಸಂಬಂಧಪಟ್ಟದ್ದು ಮತ್ತು ಬಡವರಿಗೆ ಸಂಬಂಧಪಟ್ಟದ್ದು ಆಗಿರುವುದರಿಂದ ಇದನ್ನು ಪ್ರಶ್ನೆ ರೂಪವಾಗಿ ಪರಿವರ್ತಿಸಿದ್ದಾರಲ್ಲಿ ಏಕೆ ಸ್ವಾಮಿ ?

ಅಧ್ಯಕ್ಷರು.—ತಾವು ಇದರ ಬಗ್ಗೆ ಏನಾ ಉಪಪ್ರಶ್ನೆ ಕೇಳಬೇಕೋ ಅದನ್ನು ಕೇಳಿ. ರೂಲ್ ಪ್ರಕಾರ ಇದನ್ನು ಪ್ರಶ್ನೆ ರೂಪವಾಗಿ ಪರಿವರ್ತಿಸಿದೆ. ಇದರ ಮೇಲೆ ನಿಮ್ಮ ಪ್ರಶ್ನೆಯನ್ನು ಹಾಕಿ.

ಶ್ರೀ ಕೆ. ಬಿ. ಮಲ್ಲಪ್ಪ.—ಈ ಜನತಾ ಹೌಸಿಂಗ್ ಸ್ಕೀಂ ಪ್ರಕಾರ ಹರಿಜನ ಮತ್ತು ಗಿರಿಜನರಿಗೆ ಕಟ್ಟಿದಂಥಾ ಮನೆಗಳು ಏನು ಇವೆ. ಇವು ಅಲ್ಲಲ್ಲಿ ಬಿದ್ದು ಹೋಗುತ್ತಾ ಇವೆ. ತಮಗೆ ಉದಾಹರಣೆ ಹೇಳಬೇಕಾದರೆ, ನಮ್ಮ ತಾಲ್ಲೂಕಿನಲ್ಲಿ ೧೦ ಮನೆಗಳು ಕಟ್ಟಿದರೆ ಅದರಲ್ಲಿ ೬-೮ ಮನೆಗಳು ಬಿದ್ದು ಹೋಗಿವೆ. ಮತ್ತು ಅರಕಲಗೂಡು ತಾಲ್ಲೂಕಿನ ಚಿಕ್ಕ ಬೆಮ್ಮತಿ ಮತ್ತು ದೊಡ್ಡ ಬೆಮ್ಮತಿಯಲ್ಲಿ ಶ್ರೀ ಹೆಚ್. ಸಿ. ಶ್ರೀಕಂಠಯ್ಯನವರ ಒಂದು ಕ್ಷೇತ್ರದಲ್ಲಿಯೂ ಸಹ ನಾನು ವಾರಿಯಲ್ಲಿ ಹೋಗುತ್ತಾ ಇರುವಾಗ ನೋಡಿದ್ದೇನೆ. ಆ ಒಂದು ಊರಿನಲ್ಲೂ ಸಹ ನಾಲ್ಕು ಮನೆಗಳು ಬಿದ್ದುಹೋಗಿವೆ. ಆದುದರಿಂದ ಇದು ತಮ್ಮ ಗಮನಕ್ಕೆ ಬಂದಿದೆಯೇ? ಮತ್ತು ಇದಕ್ಕೆ ಕಾರಣರಾದವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

† ಶ್ರೀ ಡಿ. ದೇವರಾಜ್ ಅರಸ್.—ಈಗ ತಾವು ಎಲ್ಲೆಲ್ಲಿ ಬಿದ್ದುಹೋಗಿದೆ ಅನ್ನುವುದನ್ನು ಈಗ ತಾನೇ ನಮ್ಮ ಗಮನಕ್ಕೆ ತಂದಿದ್ದೀರಿ. ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳನ್ನಾಗಲಿ ಅಥವಾ ಅಧಿಕಾರಿಗಳನ್ನಾಗಲಿ ಕಳುಹಿಸಿ ಎಲ್ಲೆಲ್ಲಿ ಬಿದು ಹೋಗಿವೆ ಅನ್ನುವುದನ್ನು ನೋಡಿಸೋಣ.

ಶ್ರೀ ಹೆಚ್. ಬಿ. ಲಕ್ಷ್ಮಣಯ್ಯ.—ಸ್ವಾಮಿ, ಜನತಾ ಮನೆಗಳಿಗೆ ಮರಗಳನ್ನು ಸಪ್ಲೈ ಮಾಡ ತಕ್ಕಂಥಾ ಮರಗಳು ಏನು ಇವೆ, ಮನೆಗಳನ್ನು ಕಟ್ಟಿ ಪೂರೈಸುವುದರೊಳಗೆ ಆ ಮರವೆಲ್ಲಾ ಕುಟ್ಟಿ ಹಿಡಿದು ಬಿದ್ದಿರುತ್ತದೆ. ಅಂಥಾ ಮರಗಳನ್ನು ಇವರು ಹಾಕಿದ್ದಾರೆ. ಆ ಮರಗಳನ್ನು ಕಂಟ್ರಾಕ್ಟರ್ ಮುಖಾಂತರ ಇವರು ತರಿಸುತ್ತಾರೆ. ಆ ಕಂಟ್ರಾಕ್ಟರುಗಳು ಕೀಳು ದರ್ಜೆಯ ಮರಗಳನ್ನು ಇದಕ್ಕೆ ಉಪಯೋಗಿಸಿಕೊಂಡಿರುವುದರಿಂದ ಈ ಮನೆಗಳು ಬಿದ್ದುಹೋಗಿವೆ ಅನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಮತ್ತು ಬಿದ್ದು ಹೋಗಿರತಕ್ಕಂಥಾ ಅನೇಕ ಮನೆಗಳು ಏನು ಇವೆ, ಇದನ್ನು ಯಾರು ಕಟ್ಟಿಕೊಟ್ಟಿದ್ದಾರೋ ಅಂಥಾ ಕಂಟ್ರಾಕ್ಟರ್‌ಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಡಿ. ದೇವರಾಜ್ ಅರಸ್.—ಅಂಥಾ ಕಂಟ್ರಾಕ್ಟರುಗಳಿಗೆ ಈ ಮನೆಗಳನ್ನು ಕಟ್ಟುವುದಕ್ಕೆ ಕೊಡ ಕೂಡದು ಎಂದು ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ ಮತ್ತು ಈ ಬಗ್ಗೆ ಡೆಪ್ಯೂಟಿ ಕಮೀಷನರೊಂದಿಗೆ ಮಾತ ನಾಡಿ ನೀವೇ ಆ ಮರಗಳನ್ನು ಅಂದರೆ ನಂದಿ ಮರವಾಗಲಿ ಅಥವಾ ಮತ್ತಿ ಮರವಾಗಲಿ ಗೌರ್ನಮೆಂಟ್ ಟಿಂಬರ್ ಡಿಪೋವಿನಲ್ಲಿ ಕೊಂಡು ಕೊಂಡು ನೀವೇ ಕುಯ್ಯಿಸಿ ಕೊಡಬೇಕು ಎಂದು ಹೇಳಿದ್ದೇವೆ. ಮತ್ತು ಈ ಕೆಲಸವನ್ನು ಆ ಕಂಟ್ರಾಕ್ಟರುಗಳಿಗೆ ಕೊಡಬೇಡಿ ಅಂದರೆ ಇಂತಹ ಮನೆಗಳನ್ನು ಕಟ್ಟುವಂಥಾ ಕಂಟ್ರಾಕ್ಟರುಗಳಿಗೆ ಕೊಡಕೂಡದು ಎಂದು ಹೇಳಿದ್ದೇವೆ. ನಾನು ತಮಗೆಲ್ಲರಿಗೂ ಸಲಹೆ ಮಾಡುವುದೇನೆಂದರೆ, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸರ್ಕಾರ ಎಷ್ಟೆಷ್ಟು ಮನೆಗಳನ್ನು ಕಟ್ಟಿಸುತ್ತದೆ. ಆ ಮನೆಗಳನ್ನು ಸ್ಥಳೀಯ ಜನರ ಸಹಕಾರದಿಂದ ಮತ್ತು ಸ್ಥಳೀಯವಾಗಿ ದೊರಕುವ ಉಪಕರಣಗಳಿಂದ ಕಟ್ಟಿಸುವ ಏರ್ಪಾಡು ಮಾಡಿ. ಮರಮುಟ್ಟುಗಳ ಕೆಲಸವನ್ನು ಕಂಟ್ರಾಕ್ಟರುಗಳಿಗೆ ಬಿಟ್ಟು, ಅವರು ಲಾಭ ಮಾಡಿಕೊಳ್ಳುವುದಕ್ಕೆ ಸರ್ಕಾರ ಬಿಡುವುದಿಲ್ಲ. ಜಿಲ್ಲಾಧಿಕಾರಿಗಳೇ ಮರವನ್ನು ಕೊಂಡು, ಅದರ ಜವಾಬ್ದಾರಿಯನ್ನು ಅವರೇ ಹೊರಬೇಕೆಂದು ಸರ್ಕಾರ ತಿಳಿಸಿದೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಕಂಟ್ರಾಕ್ಟರುಗಳು ಒದಗಿಸಿರುವ ಕಿಟಕಿ ಬಾಗಿಲುಗಳು ಅನೇಕ ಮನೆಗಳಲ್ಲಿ ಸರಿಯಾಗಿಲ್ಲ. ದನ ಕಾಯುವವನು ಮಾಡುವ ಮರಗೆಲಸಗಳಿಗಿಂತಲೂ ಇವು ಕಡೆಯಾಗಿವೆ. ಆದುದರಿಂದ, ಇಂತಹ ಮನೆಗಳಿಗೆ ಉತ್ತಮ ಕಿಟಕಿ ಬಾಗಿಲುಗಳನ್ನು ಸರ್ಕಾರ ಒದಗಿಸುವುದಕ್ಕೆ ಏರ್ಪಾಡು ಮಾಡುವುದೇ?

ಶ್ರೀ ಡಿ. ದೇವರಾಜ್ ಅರಸ್.—ಸ್ಥಳೀಯ ಅಧಿಕಾರಿಗಳು ಇದರ ಬಗ್ಗೆ ಜವಾಬ್ದಾರಿ ತೆಗೆದು ಕೊಳ್ಳದೆ ಸುಮ್ಮನೆ ಕಂಟ್ರಾಕ್ಟ್ ಕೊಟ್ಟುಬಿಟ್ಟಿದ್ದಾರೆ. ಈ ಕೆಲಸಗಳನ್ನು ಕಂಟ್ರಾಕ್ಟರುಗಳಿಗೆ ಕೊಡಬೇಡಿ ಎಂದು ನಾನು ಹಲವಾರು ಸಲ ಹೇಳಿದ್ದೇನೆ. ಆದರೂ ಕಂಟ್ರಾಕ್ಟರುಗಳಿಗೆ ಈ ಕೆಲಸವನ್ನು ಕೊಟ್ಟಿದ್ದಾರೆ; ನಾನು ಇಲ್ಲವೆಂದು ಹೇಳುವುದಿಲ್ಲ. ಆದುದರಿಂದ, ಸರ್ಕಾರ ಕೊಡುವ ಮರವನ್ನು ಸರಿಯಾದ ರೀತಿಯಲ್ಲಿ ತಾವೇ ಹಂಚಿಕೆ ಮಾಡಿ; ಪಂಚಾಯಿತಿಯವರು ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಯವರೆಲ್ಲರೂ ಸೇರಿ, ನಿಂತುಕೊಂಡು ಒಳ್ಳೆಯ ಕೆಲಸ ಮಾಡಿಸಿ.

ಶ್ರೀ ಜಿ. ಬಿ. ಶಂಕರರಾವ್.—ಕೆಲವೊಂದು ಜನತಾ ಗೃಹಗಳು ಬಿದ್ದುಹೋಗಿವೆ ಮತ್ತು ಕೆಲವು ಮನೆಗಳು ಬಿದ್ದುಹೋಗುವ ಸ್ಥಿತಿಯಲ್ಲಿವೆ. ಹೀಗೆ ಬಿದ್ದುಹೋದ ಮನೆಗಳನ್ನು ಪುನಃ ಸರ್ಕಾರದ ವೆಚ್ಚದಿಂದ ಕಟ್ಟಿಸಲಾಗುವುದೆ ಅಥವಾ ಕಂಟ್ರಾಕ್ಟರಿಗೆ ಕೊಟ್ಟು ಕಟ್ಟಿಸಲಾಗುವುದೇ?

ಶ್ರೀ ಡಿ. ದೇವರಾಜ್ ಅರಸ್.—ಕಂಟ್ರಾಕ್ಟರಿಗೆ ಕೊಡುವ ವಿಚಾರ ಇಲ್ಲಿ ಬರುವುದಿಲ್ಲ. ಸ್ವತಃ ಕಟ್ಟಿಕೊಂಡವರ ಮನೆಗಳು ಬಿದ್ದುಹೋದರೆ, ಅದಕ್ಕವರೇ ಜವಾಬ್ದಾರರು. ಸರಿಯಾದ ಮರಗಳನ್ನು ಉಪಯೋಗಿಸಿದೆ ಕಟ್ಟುವ ಮನೆಗಳ ಬಗ್ಗೆ ಈಗಾಗಲೇ ಅಧಿಕಾರಿಗಳಿಗೆ ತಿಳಿಸಲಾಗಿದೆ. ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಯವರೇ ಇದಕ್ಕೆ ಜವಾಬ್ದಾರರೆಂದೂ ಸಹ ಹೇಳಲಾಗಿದೆ.

Clearance of Slum Areas in Bangalore City

7. SRI T. R. SHAMANNA (Basavanagudi).—Will the Minstter for Municipal Administration be pleased to state.—

(*a*) when was the Karnataka Slum Clearance Board formed ;

(*b*) the number of slums that were existing in Bangalore City Corporation area just before the Board was formed;

(*c*) the number of slums now extsting *i.e.*, in 1978 ;

(*d*) the amount spent yearwise from the beginning upto 1977-78 in Bangalore City ;

(*e*) the number of slums cleared or improved in Bangalore City ?

SRI H.C. SRIKANTAIAH (Minister for Municipal Administration).—

(*a*) The Karnataka Slum Clearance Board was formed on 3rd July 1975.

(*b*) There were 161 slums identified at the time of formation of the Karnateka Slum Clearance Board. The work of identifying all the slums was not complete then and it has since been completed.

(*c*) There are now 180 slums.

(*d*)—

1971-72 to 1973-74	Rs.	72.69,416
1974-75	Rs.	4,56,772
1975 76	Rs.	24,09.920
1976-77	Rs.	37,99,602
1977-78	Rs.	35,47,651
Total		1,74,83,361

(*e*) No. of slums cleared : 6
No. of slums improved : 66

ಶ್ರೀ. ಟಿ. ಆರ್. ಶಾಮಣ್ಣ.—ಕಳೆದ ಏಳು ವರ್ಷಗಳಲ್ಲಿ ಸುಮಾರು ೧,೭೫,೦೦,೦೦೦ ರೂಪಾಯಿಗಳನ್ನು ಖರ್ಚುಮಾಡಿ, ಆರು ಕೊಳಚೆ ಪ್ರದೇಶಗಳನ್ನು ನಿರ್ಮೂಲನೆ ಮಾಡಿ, ಉತ್ತಮಪಡಿಸಿದ್ದೇವೆ ಎಂದು ಹೇಳಲಾಗಿದೆ. ಇತ್ತ ಕಡೆ ಏಳು ವರ್ಷಗಳಲ್ಲಿ ಆರು ಕೊಳಚೆ ಪ್ರದೇಶಗಳು ನಿರ್ಮೂಲವಾಗಿದ್ದರೆ, ಅತ್ತ ಕಡೆ ಸುಮಾರು ೬೦-೭೦ ಕೊಳಚೆ ಪ್ರದೇಶಗಳು ಹೊಸದಾಗಿ ಸೃಷ್ಟಿಯಾಗಿವೆ. ಹೀಗಾದರೆ, ಕೊಳಚೆ ಪ್ರದೇಶಗಳ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುವರೇ ?